International Journal of Kannada Research
www.kannadajournal.com

**ISSN: 2454–5813**
IJKR 2022; 8(3): 105-109
© 2022 IJKR
www.kannadajournal.com
Received: 22-06-2022
Accepted: 25-07-2022

**ಡಾ.ಎಸ್.ಸಂದರೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ.ಎಸ್.ಸಂದರೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

# ವಚನಗಳಲ್ಲಿ ಜಾತಿಯ ನಿರಾಕರಣ

**ಡಾ.ಎಸ್.ಸಂದರೇಶ**

**ಪೀಠಿಕೆ**

ಹನ್ನೆರಡನೇ ಶತಮಾನ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಕಾಲಘಟ್ಟ. ಈ ಕಾಲದಲ್ಲಿ ಅಭಿವ್ಯಕ್ತಗೊಂಡ ವಚನಗಳನ್ನು ಅನೇಕರು 'ಸಮಾಜೋಧಾರ್ಮಿಕ ಕ್ರಾಂತಿ' ಎಂದರು. ಇನ್ನೂ ಕೆಲವರು 'ವಚನ ಚಳುವಳಿ' ಎಂದರು, 'ಕಲ್ಯಾಣ ಕ್ರಾಂತಿ' ಎಂದರು. ಈ ಬಗೆಯ ಹಲವು ಪರಿಕಲ್ಪನೆಗಳನ್ನು ಏನೆಂದು ಕರೆಯಬೇಕು ಎನ್ನುವುದನ್ನು ಸಂಶೋಧನೆ, ಭಿನ್ನ ಬಗೆಯ ತಲಸ್ಪರ್ಶಿ ಅಧ್ಯಯನಗಳು ನಿರ್ಧರಿಸಬೇಕು.

'ಕರ್ಮ ಸಿದ್ಧಾಂತದ' ಮೇಲೆ ರೂಪುಗೊಂಡು ಆಚರಣೆಗೆ ಒಳಪಟ್ಟ ಸಂಪ್ರದಾಯದಿಂದ ಕೂಡಿದ ವ್ಯವಸ್ಥೆ ಸಮಾಜವನ್ನು ಅನೇಕ ಗುಂಪುಗಳಾಗಿ ಒಡೆಯಿತು. ಚಾತುವರ್ಣ ಪದ್ಧತಿಯನ್ನು ಒಪ್ಪಿಕೊಂಡ ವೇದ, ಉಪನಿಷತ್ತುಗಳು ಮಾನವನ ಹುಟ್ಟಿನ ಅಂತಸ್ತನ್ನು ವ್ಯಾಖ್ಯಾನಿಸಿದ್ದು ಅವೈಜ್ಞಾನಿಕ ಹಿನ್ನೆಲೆಯಲ್ಲಿ ಹೀಗಾಗಿ ಬ್ರಾಹ್ಮಣ ತಲೆಯಿಂದ, ಕ್ಷತ್ರಿಯ ತೊಡೆಗಳಿಂದ, ವೈಶ್ಯ, ಶೂದ್ರ ಪಾದಗಳಿಂದ ಅಸ್ಪೃಶ್ಯ ಪಾದದ ಕೆಳಗೆ ಜನಿಸಿದರು ಎಂದು ಋಗ್ವೇದ ಹೇಳುತ್ತದೆ ಹಾಗೆಯೇ ಇವನನ್ನು 'ಪಂಚಮ' ಎಂದು ಕರೆಯಲಾಯಿತು. ಮೇಲಿನವರೆಲ್ಲರ ಸೇವೆಯನ್ನು ಮಾಡಲು ಹುಟ್ಟಿದವನು ಇವನು ಈ ಬಗೆಯ ಕರ್ಮದ ಆಧಾರದ ಮೇಲೆ ವಿಭಜನೆಗೊಂಡ ಸಮಾಜ, ಶ್ರೇಷ್ಟ–ಕನಿಷ್ಟ ಎಂಬುದನ್ನು ಹುಟ್ಟಿನ ಆಧಾರದ ಮೇಲೆ ನಿರ್ಧರಿಸಲಾಯಿತು.

ವೈದಿಕ ಚಿಂತನೆಯಲ್ಲಿ ಇಡೀ ಸಮಾಜವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ವೇದ, ಆಗಮ, ಶಾಸ್ತ್ರ, ಪುರಾಣ, ಉಪನಿಷತ್ತು, ಮನುಸ್ಮೃತಿ ಮುಂತಾದವುಗಳನ್ನು ಆಧಾರವಾಗಿಟ್ಟುಕೊಂಡು ಶೂದ್ರ ಸಮುದಾಯ, ಸ್ತ್ರೀ ಸಮುದಾಯ, ಅಸ್ಪೃಶ್ಯರನ್ನು ದೂರ ಇಡುವ ಪ್ರಯತ್ನ ನಿರಂತರವಾಗಿ ನಡೆಯಿತು. ಇಂತಹ ಸಂದರ್ಭದಲ್ಲಿ ಅಸ್ಪೃಶ್ಯನನ್ನು 'ಚಾಂಡಲ'ನೆಂದು ಕರೆಯಲಾಯಿತು. "ವೈದಿಕ ಧರ್ಮ ಹುಟ್ಟುಹಾಕಿದ ವರ್ಣಾಶ್ರಮ ಪದ್ಧತಿಯಿಂದಾಗಿ ಅಂದಿನ ಮಾನವ ಸಮಾಜ ಒಡೆದು ಹೋಳು–ಹೋಳಾಯಿತು. ಸಮಾಜಿಕ ಸಮಾನತೆ, ರಾಜಕೀಯ ಸ್ವಾತಂತ್ರ್ಯ, ಶೈಕ್ಷಣಿಕ ಸವಲತ್ತುಗಳಿಂದ ಬಹು ಸಂಖ್ಯಾತ ದುಡಿಯುವ ಜನವರ್ಗ ಶೋಷಿತ ಜನಸಮುದಾಯ ಮತ್ತು ಮಹಿಳೆಯರು ವಂಚಿತರಾಗಿದ್ದರು. ವ್ಯವಸ್ಥೆಯ ಸಂಚಿನಿಂದಾಗಿ ಮೂಢನಂಬಿಕೆ, ಅಂಧ ಶ್ರದ್ಧೆ ಕಂದಾಚಾರಗಳು ಜನ ಮನದಲ್ಲಿ ಬೇರೂರಿದ್ದವು. ಈ ಕೆಳಗಿನ ವರ್ಗದ ಶೋಷಿತ ಜನತೆ ತಾವು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಸ್ವಾತಂತ್ರ್ಯ ಸವಲತ್ತುಗಳನ್ನು ಪಡೆದುಕೊಳ್ಳುವುದು ಅಪರಾಧವೆಂಬ ಕೀಳರಿಮೆಯನ್ನು ಹೊಂದಿದವರಾಗಿದ್ದರು"[೧] ಎಂಬ ಹೇಳಿಕೆ ಅಕ್ಷರಶಃ ಸತ್ಯವಾದುದು. ಹೀಗಾಗಿ ಬಸವಪೂರ್ವ ಯುಗ ಅನೇಕ ಸಾಮಾಜಿಕ ಸಂಕಷ್ಟ ಮತ್ತು ಅನಿಷ್ಟಗಳನ್ನು ಎದುರಿಸಬೇಕಾಯಿತು. ಆದ್ದರಿಂದ "ವಿವಿಧ ನೆಲೆಗಳಿಂದ ಬಂದ ವಚನಕಾರರು ಅಸಮಾನತೆಯ ವಿರುದ್ಧ ಹೋರಾಡಲು ಎಲ್ಲರಿಗೂ ಒಪ್ಪಿಗೆಯಾಗಬಹುದಾದ ಒಂದು ತಾತ್ವಿಕ ನೆಲೆಗಟ್ಟನ್ನು ರೂಪಿಸಿದರು. ಬಂದ ದಾರಿಗಳು ಬೇರೆ–ಬೇರೆಯಾಗಿದ್ದರೂ ಅವರು ಕೂಡಬೇಕೆಂದಿರುವ ತಾಣ ಸೇರಬೇಕೆಂದಿರುವ ಸ್ಥಳ ಒಂದೇಯಾಗಿತ್ತು"[೨]. ಈ ಕಾರಣಗಳಿಂದಾಗಿ ಧಾರ್ಮಿಕ ಅಸಮಾನತೆ, ಜಾತಿಯ ಅಸಮಾನತೆಯ ವಿರುದ್ಧ ಹೋರಾಡುವ ಪ್ರಮುಖ ಕೇಂದ್ರ ವಿಷಯವನ್ನಾಗಿ ಮಾಡಿಕೊಂಡರು. ಧರ್ಮ ಶೋಷಣೆಯ ಮಾಧ್ಯಮವನ್ನಾಗಿ ಮಾಡಿಕೊಂಡ ವ್ಯವಸ್ಥೆಯನ್ನು ಧರ್ಮದಲ್ಲಿನ ವಿಕೃತಿಗಳನ್ನು ನಾಶಗೊಳಿಸುವ ಪ್ರಯತ್ನ ಮಾಡಿದರು. ಹೀಗೆ ಯಜಮಾನ ಸಂಸ್ಕೃತಿಯ ವಿರುದ್ಧ ತೀವ್ರವಾದ ಆಕ್ರೋಶವನ್ನು ಸ್ಫೋಟಕವಾದ ವಚನಗಳ ಮೂಲಕ ವ್ಯಕ್ತವಾಯಿತು. ಆದ್ದರಿಂದ "ಸ್ತ್ರೀ ಚಳುವಳಿಯನ್ನು ಸ್ತ್ರೀಯರೇ ಮಾಡುವುದಾಗಲಿ, ಅಸ್ಪೃಶ್ಯರ ಹೋರಾಟವನ್ನು ಅಸ್ಪೃಶ್ಯರೇ ಹುಟ್ಟುಹಾಕುವುದಾಗಲಿ ೧೨ನೇ ಶತಮಾನದಲ್ಲಿ ಕಾಣುವುದಿಲ್ಲ. ವಚನಕಾರರು ಬೇರೆ ಬೇರೆ ಜಾತಿ–ಜನಾಂಗದಿಂದ ಬಂದವರಾಗಿದ್ದರೂ, ಬಂದು ಶರಣ ಚಳುವಳಿಯಲ್ಲಿ

ಸೇರಿದ ನಂತರ ಅವರು ಶರಣರೇ ಆದರು. ಹೀಗಾಗಿ ಅಸಮಾನತೆಯ ವ್ಯವಸ್ಥೆಯ ಎಲ್ಲ ಕ್ಷೇತ್ರಗಳಲ್ಲಿ ನಡೆಯುತ್ತಿದ್ದ ಅನ್ಯಾಯ–ಅತ್ಯಾಚಾರಗಳ ವಿರುದ್ಧ ಅವರು ಹೋರಾಟ ಮಾಡಿದರು. ಹೀಗಾಗಿ ವಚನ ಚಳುವಳಿ ಎಲ್ಲ ಶೋಷಿತರ ಚಳುವಳಿಯಾಗಿತ್ತು. ಅದು ಎಲ್ಲ ಬಗೆಯ ಅನ್ಯಾಯವನ್ನೂ ಪ್ರತಿಭಟಿಸಿತು. ಅಸಮಾನತೆಯ ವಿರುದ್ಧ ಹೋರಾಡುತ್ತ ಮಾನವೀಯ ಮೌಲ್ಯಗಳನ್ನು ಹುಟ್ಟುಹಾಕಿತು”[೩] ಎಂಬ ಮಾತು ಅಸಮಾನತೆಯ ಸಮಾಜವನ್ನು ಕಟ್ಟಲುಹೊರಟ ವಚನಕಾರನ ಅಪರಿಮಿತ ಜ್ಞಾನ, ಒಗಟ್ಟು, ಅವರ ಬೌದ್ಧಿಕವಾದ ಆಕ್ರಮಣ ಗೋಚರವಾಗುತ್ತದೆ. ಈ ಎಲ್ಲಾ ತಾತ್ವಿಕತೆಯ ಹಿನ್ನೆಲೆಯಲ್ಲಿ ಇದರ ನೇತೃತ್ವ ಪ್ರಮುಖವಾಗಿ ಬಸವಣ್ಣನವರದಾಗಿದೆ. ಇವರ ಜೊತೆಗೆ ಅಂಬಿಗರ ಚೌಡಯ್ಯ, ಮಾದರ ಚೆನ್ನಯ್ಯ–ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ, ಕಾಳವ್ವೆ, ಮಡಿವಾಳ ಮಾಚಿದೇವ ಮುಂತಾದ ವಚನಕಾರರು ಜಾತಿ ನಿರಾಕರಣೆಯನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕರ್ಮ ಸಿದ್ಧಾಂತದ ಮೇಲೆ ರೂಪುಗೊಂಡ ಸಮಾಜ ಮೇಲು–ಕೀಳು ಎಂಬ ಜಾತಿ ಆಧಾರದ ಮೇಲೆ ವಿಂಗಡಣೆಯಾಗಿತ್ತು. ಅದನ್ನು ಬಸವಣ್ಣನವರು ಹೀಗೆ ಅಲ್ಲಗಳೆಯುತ್ತಾರೆ.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಕೂಡಲ ಸಂಗಮದೇವ
ಲಿಂಗಸ್ಥಲವನ್ನರಿದವನೇ ಕುಲಜನು
(ಬಸವಣ್ಣನವರ ಷಟ್ಸ್ಥಲದ ವಚನಗಳು, ಡಾ.ಎಲ್.ಬಸವರಾಜು,ಪುಟ–೨೦೪,ವ–೫೯೧)

ಕಾಯಕವೇ ಕೈಲಾಸವೆಂದ ಶರಣರು ಕಾಯಕ ನಿಷ್ಠೆಯನ್ನಷ್ಟೇ ಪಾಲಿಸುತಿದ್ದರು. ವ್ಯಕ್ತಿಯಲ್ಲಿ ಕಾಯಕವನ್ನು ತೋರುತಿದ್ದರು. ವ್ಯಕ್ತಿ ಮತ್ತು ಕಾಯಕಕ್ಕೆ ಜಾತಿಯ ಹಂಗಿಲ್ಲ ಅವನು ಶರಣ ಅಷ್ಟೇ. ವೃತ್ತಿಯಿಂದ ಜಾತಿಗಳ ಹುಡುಕುವ ಪರಿಪಾಠವನ್ನು ವಿಡಂಬಿಸುವುದನ್ನು ಕಾಣಬಹುದು. ಜಾತಿ ವಿನಾಶದ ಪರಿಕಲ್ಪನೆಯನ್ನು ಬಸವಣ್ಣನವರು ಅಮೂಲಾಗ್ರವಾಗಿ ಬದಲಾವಣೆ ಆಗಬೇಕು ಎಂದು ಬಲವಾಗಿ ನಂಬಿದ್ದರು. ಪ್ರತಿಯೊಬ್ಬ ಜೀವಿಗೂ ಅವನದೇ ಆದ ಅನನ್ಯತೆಗಳಿವೆ. ಈ ಅನನ್ಯತೆಯನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಪ್ರಶ್ನೆಗಳು ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತದೆ ಎನ್ನುವುದನ್ನು ಮಾರ್ಮಿಕವಾಗಿ ಹೇಳುತ್ತಾರೆ.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ
ಕೂಡಲ ಸಂಗಮದೇವ
ನಿಮ್ಮ ಮನೆಯ ಮಗನೆಂದೆನಿಸಯ್ಯ.
(ಬಸವಣ್ಣನವರ ಷಟ್ಸ್ಥಲದ ವಚನಗಳು, ಡಾ.ಎಲ್.ಬಸವರಾಜು,ಪುಟ–೨೩,ವ–೬೨)

ಎಂಬ ವಚನ ಸಾಮಾಜಿಕವಾಗಿ ಕೆಳಸ್ತರದ ವ್ಯಕ್ತಿಗಳನ್ನು ಕಾಣುವ ನೀತಿಯನ್ನು ವಚನವೇ ಹೇಳುತ್ತಿದೆ. ಹೀಗಾಗಿ ಇವನು ಯಾರು ಎಂದು ಕೇಳುವ ಸಣ್ಣತನ ಒಳ್ಳೆಯದಲ್ಲ. ಸಮಾಜ ಭಾವಿಸಿದ ಕೆಳಸ್ತರದ ವ್ಯಕ್ತಿಯ ಮೂಲವನ್ನು ಶೋಧಿಸುವ ಕ್ರಮ ಒಳ್ಳೆಯದಲ್ಲ ಇದು ನಿಚೋಚ್ಚ ಭಾವನೆಗೆ ಕಾರಣವಾಗುತ್ತದೆ. ಸಹೋದರತೆ, ಸಮಾನತೆ ಇರಬೇಕು. ಸಮಾಜದಲ್ಲಿ ಬದುಕುವ ಪ್ರತಿಯೊಬ್ಬ ವ್ಯಕ್ತಿಯನ್ನು ನಮ್ಮವ ಎಂಬ ಭಾವನೆ ಬರದ ಹೊರತು ಈ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವಾಗುವುದಿಲ್ಲ ಎಂಬ ವೈಜ್ಞಾನಿಕ ತಿಳುವಳಿಕೆ ಅವರದು.

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಬೋ ಕುಲದಿಂದ ಮುನ್ನೇನಾದಿರಿಂಬೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪಕಮ್ಮಾರ
ಕೌಂಡಿನ್ಯನೆಂಬ ಋಷಿ ಮೂರು ಭುವನವನರಿಯೆ ನಾವಿದ ಕಾಣಿಭೋ
ನಮ್ಮ ಕೂಡಲ ಸಂಗನ ವಚನವಿಂತೆದುದು
ಶ್ವಪಚೋಪಿಯಾದರೇನು, ಶಿವಭಕ್ತನೇ ಕುಲಜಂಭೋ.
(ಬಸವಣ್ಣನವರ ಷಟ್ಸ್ಥಲದ ವಚನಗಳು, ಡಾ.ಎಲ್.ಬಸವರಾಜು,ಪುಟ–೨೦೪,ವ–೫೯೦)

ವ್ಯಾಸನಿಂದ ಹಿಡಿದು ಕೌಂಡಿನ್ಯ ಮುನಿಯವರೆಗೆ ಇವರ ಹುಟ್ಟಿನ ಮೂಲವನ್ನು ಹೇಳುತ್ತಾ ಬೆಸ್ತ, ಬೇಡ, ಚಮ್ಮಾರ, ಕ್ಷೌರಿಕ ಮುಂತಾದ ಸಣ್ಣ ಪುಟ್ಟ ಜಾತಿಗಳನ್ನು ಉಲ್ಲೇಖಿಸಿ ಇವರುಗಳು ಮಹಾಜ್ಞಾನಿಗಳು, ಪ್ರತಿಭಾನ್ವಿತರು ಇವರನ್ನು ಜಾತಿಯ ಆಧಾರದ ಮೇಲೆ ಇವರ ಪ್ರತಿಭೆಯನ್ನು ಅಳೆಯುವುದು ಸರಿಯಾದ ಕ್ರಮವಲ್ಲ 'ಶ್ವಪಚ'ನಾಗಿದ್ದು ಶಿವಭಕ್ತನಾಗಿದ್ದರೆ ಅವನು ಕುಲಜನೇ ಎನ್ನುವ ಮೂಲಕ ಜಾತಿಯ ನಿರಾಕರಣೆ ಮಾಡುವುದನ್ನು ಕಾಣುತ್ತೇವೆ.

ಶೆಟ್ಟಿಯೆಂಬೆನೇ ಸಿರಿಯಾಳನ
ಮಡಿವಾಳನೆಂಬೆನೇ ಮಾಚಯ್ಯನ
ಡೋಹರನೆಂಬೆನೇ ಕಕ್ಕಯ್ಯನ
ಮಾದರನೆಂಬೆನೇ ಚನ್ನಯ್ಯನ
ಆನುಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ.
(ಬಸವಣ್ಣನವರ ಷಟ್ಸ್ಥಲದ ವಚನಗಳು, ಡಾ.ಎಲ್.ಬಸವರಾಜು,ಪುಟ–೧೧೭, ವ–೩೪೬)

ಜಾತಿವ್ಯವಸ್ಥೆಯನ್ನು ನಿರಾಕರಿಸುವ ಬಸವಣ್ಣನವರು ಶೆಟ್ಟಿ ಎಂದು ಸಿರಿಯಾಳನನ್ನು ಕರೆಯುವುದಾಗಲಿ, ಮಾಚಯ್ಯನನ್ನು ಮಡಿವಾಳ ಎಂದಾಗಲಿ, ಕಕ್ಕಯ್ಯನನ್ನು ಡೋಹರನೆಂದಾಗಲಿ ಚನ್ನಯ್ಯನನ್ನು ಮಾದಾರ ಎಂದಾಗಲಿ ಕರೆಯುವುದು ಕೂಡದು. ಒಂದು ವೇಳೆ ಕರೆದಿದ್ದೆ ಆದಲ್ಲಿ ನಾನು ಜಾತಿಯಲ್ಲಿ ಶ್ರೇಷ್ಠನಾದ ಹಾರವ ಎಂದು ಬೀಗಿದ ಹಾಗೆ ಆಗುತ್ತದೆ. ಇಲ್ಲಿ ನಿಚೋಚ್ಚ ಭಾವನೆಗಳಿಗೆ ಅವಕಾಶವಿಲ್ಲ. ಅದು ಅವರರವರ ಕಾಯಕ–ನಿಷ್ಠೆಗೆ ಸಂಬಂಧಪಟ್ಟದ್ದು. ಇವುಗಳೆಲ್ಲ ಅವೈಜ್ಞಾನಿಕ ತಿಳುವಳಿಕೆಗಳಾಗಿವೆ. ಅವರು ಮಾಡುವ ನೀಚ ಕರ್ಮಗಳು ಮಾತ್ರ ಜಾತಿಯನ್ನು ನಿರ್ಧರಿಸುತ್ತದೆ ಎನ್ನುತ್ತಾರೆ.

(೧) ಹೊಲೆಯೊಳಗೆ ಹುಟ್ಟಿ ಕುಲವನಱುಸುವೆಯೆಲವೋ
ಮಾತಂಗಿಯ ಮಗ ನೀನು
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು.
(ಬಸವಣ್ಣನವರ ಷಟ್ಸ್ಥಲದ ವಚನಗಳು, ಡಾ.ಎಲ್.ಬಸವರಾಜು,ಪುಟ–೧೯, ವ–೫೭೭)

(೨) ಕೊಲ್ಲುವವನೆ ಮಾದಿಗ
ಹೊಲಸು ತಿಂಬುವವನೇ ಹೊಲೆಯ
ಸಕಲ ಜೀವಾತ್ಮರಿಗೆ ಲೇಸನು ಅವಂದಿರ ಕುಲವೇನೋ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು.
(ಬಸವಣ್ಣನವರ ಷಟ್ಸಲದ ವಚನಗಳು, ಡಾ.ಎಲ್.ಬಸವರಾಜು,ಪುಟ–೨೦೫, ವ–೫೯೨)

ಕುಲವನ್ನ ಅರಸುವವರಿಗೆ ಮತ್ತು ಕೀಳಾದವರು ಯಾರು? ಎಂಬ ಸ್ಫೋಟಕ ನುಡಿ ಬಸವಣ್ಣನವರದು. ಕೊಲ್ಲುವವನು ಯಾರು? ಕೊಲ್ಲದೇ ಸತ್ತ ಪ್ರಾಣಿಗಳ ಆಹಾರವನ್ನಾಗಿ ಮಾಡಿಕೊಂಡವರು ಯಾರು? ಯಜ್ಞಯಾಗಗಳ ಹೆಸರಿನಲ್ಲಿ ಪ್ರಾಣಿಗಳನ್ನು ಕೊಂದು ಆಹಾರವನ್ನಾಗಿ ಮಾಡಿಕೊಳ್ಳುವವರು ಯಾರು? ಶಾಸ್ತ್ರ ಮತ್ತು ವೇದಗಳು ಜೀವ ವಿರೋಧಿಯಾದುದು ಎಂದು ಹೇಳುವ ಮೂಲಕ ಕೊಂದು ಹೊಲಸು ತಿನ್ನುವವರು 'ಹೀನಕುಲದವರು' ಶಿವಭಕ್ತನಾದ ಮೇಲೆ ಮಾದಿಗನಾಗಲಿ, ಹೊಲೆಯನಾಗಲಿ ಅವರು ಕುಲಜರು ಎಂಬ ಕಟುವಾದ ನುಡಿ ಅವರದಾಗಿತ್ತು.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಮನಕ್ಕೆ
ಕುಲವೊಂದೇ ತನ್ನ ತಾನರಿದವಂಗೆ.....................
(ಬಸವಣ್ಣನವರ ಷಟ್ಸಲದ ವಚನಗಳು, ಡಾ.ಎಲ್.ಬಸವರಾಜು, ಪುಟ–೩೨೦, ವ–೮೮೦)

ಕುಲ ಕುಲವೆಂದು ವ್ಯಾಕುಲಕ್ಕೆ ಒಳಗಾಗುವ ಬದಲು ಮಾನವ ಕುಲ ಒಂದೇ, ಧಾರ್ಮಿಕವಾಗಿ, ಸಾಮಾಜಿಕವಾಗಿ ಭಿನ್ನತೆಗಳಿರಬಹುದು ನೆಲೆನಿಂತಿರುವ ಭೂಮಿ, ಹೊಲಗೇರಿ, ಶಿವಾಲಯ, ಜಲ ಇವೆಲ್ಲವೂ ಭೌತಿಕವಾಗಿ ಒಂದೇ ಆಗಿರುವುದರಿಂದ ಮನುಷ್ಯರಲ್ಲಿ ಭೇದವೆಣಿಸದೆ ಮನುಷತ್ವದ ಗುಣಹೊಂದಿರಬೇಕು. ಮಡಿವಂತಿಕೆಯನ್ನು ಬಿಡಬೇಕು ಎಂಬ ಸಮ ಸಮಾಜವನ್ನು ಕಟ್ಟುವ ಸಂಕಲ್ಪ ಅವರದಾಗಿತ್ತು.
ಅಂಬಿಗರ ಚೌಡಯ್ಯನ ವಚನಗಳು ತೀವ್ರವಾದ ಪ್ರತಿಭಟನೆಯ ಗುಣಗಳನ್ನು ಹೊಂದಿರುವಂತಹವುಗಳಾಗಿವೆ. ಆತನ ವಚನಗಳು ಅತ್ಯಂತ ಪ್ರಖರವಾದುದು ಸಮಾಜದೊಳಗಿನ ವೈದಿಕ ಸಂಪ್ರದಾಯವನ್ನು. ಜಾತಿ ವ್ಯವಸ್ಥೆಯನ್ನು ತೀವ್ರ ತರಾಟೆಗೆ ತೆಗೆದುಕೊಂಡವನು ಮತ್ತು ಖಡಕ್ಕಾದ ನುಡಿಗಳೇ ಹೇಳುತ್ತವೆ ಆತನ ವಚನ ಎಷ್ಟೊಂದು ಮೊನಚುತನವನ್ನು ಹೊಂದಿತ್ತು ಎಂಬುದು.

ಕುರಿಕೋಳಿ ಕಿರುಮೀನು ತಿಂಬವರ ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ ಊರಿಂದ ಹೊರಗಿರು ಎಂಬರು
ಆತನು ಹರಿಗೋಲಾಯಿತ್ತು.
ಬೊಕ್ಕಣ, ಸಿದ್ದಲಿಕೆ, ಬಾರುಕೋಲು, ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು
ಈ ಸಿದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾವಿಗೆಯ ತೆಕ್ಕೊಂಡು ಬಾಯ ಕೊಯ್ಯುವೆನು
ಎಂದಾತನಮ್ಮ ಅಂಬಿಗರ ಚೌಡಯ್ಯ
(ಬಸವ ಯುಗದ ವಚನ ಮಹಾ ಸಂಪುಟ–೧, ಸಂಕೀರ್ಣ ವಚನ ಸಂಪುಟ–೧, ಪುಟ–೯೫೫, ವ–೧೧೫)

ಅನೇಕ ವಚನಕಾರರು ಈ ಬಗೆಯ ವಚನಗಳನ್ನು ಹೇಳಿದ್ದಾರೆ ಆದರೆ ಈತನ ಈ ವಚನದ ತೀಕ್ಷ್ಣತೆ ಭಿನ್ನವಾದುದು. ಕುರಿ, ಕೋಳಿ, ಮೀನು ತಿನ್ನುವವರು ಇವುಗಳು ಜೀವಂತ ಇರುವಾಗಲೇ ಕೊಂದು ತಿನ್ನುತ್ತಾರೆ. ಇವರು ಸಮಾಜದ ದೃಷ್ಟಿಯಲ್ಲಿ ಶ್ರೇಷ್ಠರು ಮತ್ತು ಊರೊಳಗಿರುವವರು. ಆದರೆ ಅಮೃತವನ್ನು ಕೊಡುವ ಗೋವನ್ನು ತಿನ್ನುವವರು ಊರ ಹೊರಗೆ ಇರುವರು ಇದು ವಚನಕಾರನ ಅಸಮಾಧಾನಕ್ಕೆ ಕಾರಣ, ಜೊತೆಗೆ ಊರ ಹೊರಗಿರುವ ಹೊಲೆಯ ಚರ್ಮದಿಂದ ಬೊಕ್ಕಣ, ಸಿದ್ದಲಿಕೆ, ಬಾರುಕೋಲು, ಮದ್ದಳೆ, ಸಿದ್ದಲಿಕೆಯೊಳಗಣತುಪ್ಪ ಮುಂತಾದ ವಸ್ತುಗಳನ್ನು ಸಿದ್ಧಪಡಿಸಲು ಅವನ ಕರ್ಮಗಳು ಬೇಕು ಆದರೆ ಅವನು ಸಮಾಜಕ್ಕೆ ಬೇಡ ಎನ್ನುವ ಹೀನ ಮನಸ್ಥಿತಿಯ ಕಂಡು ಆಕ್ರೋಶದಿಂದ ಬಾಯನ್ನು ಕೊಯ್ಯುವ ಮಾತನಾಡುತ್ತಾನೆ. ಆಹಾರದಲ್ಲಿ ಶ್ರೇಷ್ಠ ಕನಿಷ್ಠ ಎನ್ನುವುದಿಲ್ಲ ಕೈಗೊಂಡ ಕಾಯಕದಿಂದ ಶ್ರೇಷ್ಠತ್ವವನ್ನು ಕಾಣಬೇಕು. ಶ್ರೇಷ್ಠ–ಕನಿಷ್ಠ ಎನ್ನುವುದು ಹುಟ್ಟಿನಿಂದಲ್ಲ ಎಂಬುದು ಈತನ ಸ್ಪಷ್ಟ ನುಡಿ. "ಕುಲಹಲವಾದಡೇನು? ಉತ್ಪತ್ತಿ ಸ್ಥಿತಿ ಲಯ ಒಂದೇ ಭೇದ" ಎಂಬ ಮಾತು ಮನುಷ್ಯ ಹುಟ್ಟುವ ಪರಿಕ್ರಮ ಒಂದೇ, ಶ್ರೇಷ್ಠ–ಕನಿಷ್ಠ ಎನ್ನುವುದು ಗೌಣ ಎಂಬುದು ಮನದಾಳದ ಮಾತು.
ಜೇಡರ ದಾಸಿಮಯ್ಯ ತನ್ನ ವಚನಗಳಲ್ಲಿ ಕುಲ–ಛಲವನ್ನು ಕುರಿತು ಮಾತನಾಡುತ್ತಾನೆ. ಹೀಗೆ ಮಾತನಾಡುವಾಗ ಜಾತಿಯಲ್ಲಿ 'ಕೀಳು' ಎನ್ನುವುದಿದೆ ಎಂದ ಮೇಲೆ, ಸರ್ವಜ್ಞನ ಮಾತಿನ ಹಾಗೆ 'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ'? ಎನ್ನುವ ರೀತಿ ಆತ ಮಾಡುವ ಕೈಂಕರ್ಯಗಳೆಲ್ಲವೂ ಹೀನವೇ ಆಗಬೇಕಲ್ಲವೆ? ಆದರೆ ಅದು ಕೀಳಾಗುವುದಿಲ್ಲ.

ಕೀಳು ಡೋಹರ ಕಕ್ಕಯ್ಯ, ಕೀಳು ಮಾದರ ಚೆನ್ನ
ಕೀಳು ಓಹಿಲದೇವ, ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣ! ರಾಮನಾಥ.
(ಸಂಕೀರ್ಣ ವಚನ ಸಂಪುಟ–೨, ಪು.ಸ–೧೨೭೯, ವ–೭೭೭)

ಜಾತಿಯಲ್ಲಿ ಕೀಳಾದವನು ತಾನು ಮಾಡುವ ಕೈಂಕರ್ಯ ಶೋಷಕ ಸಮುದಾಯಕ್ಕೆ ಕೀಳಲ್ಲ ಆದರೆ ಜಾತಿ ಮಾತ್ರ ಕೀಳು ಸಮಾಜದಲ್ಲಿ ಕೀಳೆಂದು ಭಾವಿಸುವ ಡೋಹರಕಕ್ಕ, ಮಾದರ ಚೆನ್ನರಂತ ಸಮುದಾಯ ಹಯನನ್ನು ಕರೆದಾಗ, ಅದರಿಂದ ಬಂದ ಉತ್ಪನ್ನಗಳನ್ನು ಸವಿಯುವಾಗ ಕೀಳು ಎನಿಸುವುದಿಲ್ಲ. ಕೀಳಾದವನು ಹಯನನ್ನು ಕರೆಯುವಾಗ ಇರುವ ಕೌಶಲ್ಯ, ಪರಿಣತಿ, ಒಲಿಸಿಕೊಳ್ಳುವ ಪರಿ ಇವರಿಗೆ ಮಾತ್ರ ಸಾಧ್ಯ. ಆದ್ದರಿಂದ ಹಯನನ್ನು ಕರೆಯುವ ಕಾಯಕ ಕೀಳೇ? ಹೀಗೆ ಸಾಮಾಜಿಕ ವ್ಯವಸ್ಥೆಯ ವಿಡಂಬನೆಯನ್ನು ಮಾಡುತ್ತಾನೆ.
ಅರಿವಿನ ಮಾರಿತಂದೆ ತನ್ನ ವಚನಗಳಲ್ಲಿ ಜಾತಿಯ ನಿರಾಕರಣೆಯನ್ನು ಮಾಡುತ್ತಾ ಅಂತರ್ ಜಾತಿಯ ಲೈಂಗಿಕ ಸಂಬಂಧಗಳು ಜಾತಿಯನ್ನು ಗೌಣವಾಗಿಸುತ್ತದೆ ಎಂಬುದನ್ನು ತಿಳಿಸುತ್ತಾನೆ.

ಊರ ಹೊರಗಳ ಹೊಲತಿಯ ಹಾರುವನೆರೆದು
ತನ್ನಯ ಸೂತಕ ಹೋಯಿತ್ತು
ಹೊಲತಿಯ ಕುಲ ಹರಿದು ಹಾರುವ ಹೊಲೆಯನಾಗಿ
ಆ ಹಾರುವ ಹಾರದೆ ಸದಾಶಿವಮೂರ್ತಿ ಲಿಂಗಕ್ಕೆ ಒಳಗಾದ.
(ಸಂಕೀರ್ಣ ವಚನ ಸಂಪುಟ–೧, ಪು.ಸ–೯೮೯, ವ–೪೪೮)

ಸೂತಕ, ಶೀಲ, ಶುದ್ಧ, ಶ್ರೇಷ್ಠ ಎಂದು ಬಾಯಿ ಚಪಲಕ್ಕೆ ಹೇಳುವ ವರ್ಗ ಪಂಚೇಂದ್ರಿಯಗಳನ್ನು ನಿಗ್ರಹಿಸಿಕೊಳ್ಳಲಾಗದೆ, ಊರ ಹೊರಗಿನ ಹೊಲತಿಯೊಂದಿಗೆ ದೈಹಿಕ ಸಂಬಂಧಕ್ಕೆ 'ಸೂತಕ' ವಿರುವುದಿಲ್ಲವೇ? ಕುಲಹರಿದು ಹೋಯಿತೆ? ಹಾರವ ಆ ಕ್ಷಣಕ್ಕೆ ಹೊಲೆಯನಾಗುವ ವಿಡಂಬನೆ ವ್ಯಕ್ತವಾಗಿದೆ.

ಉರಿಲಿಂಗ ಪೆದ್ದಿಯ ವಚನಗಳು ವಿಭಿನ್ನವಾದ ಆಲೋಚನೆಗಳುಳ್ಳದ್ದು. ಮಾಂಸಾಹಾರವನ್ನು ಕುರಿತು ಮಾತನಾಡುತ್ತಾನೆ. ನಾಲ್ಕು ಯುಗಗಳಲ್ಲಿ ಭಿನ್ನವಾದ ಪ್ರಾಣಿಗಳನ್ನು ವಧೆ ಮಾಡಿ ಆಹಾರವನ್ನಾಗಿ ಮಾಡಿಕೊಂಡವರು ಶ್ರೇಷ್ಠರೆನಿಸಿಕೊಂಡರು. ಆದರೆ ವಧೆ ಮಾಡದ ಮಾದಿಗ ಮತ್ತು ಹೊಲೆಯರನ್ನು ಊರ ಹೊರಗೆ ಇಟ್ಟರು ಎಂದು ಹೇಳುತ್ತಾನೆ.

ಊರ ಹೊರಗಣ ಗೃಹಮಂ ಹೊಲೆಯರಿಗೆ ಕೊಟ್ಟರು
ಊರೊಳಗಣ ಗೃಹಮಂ ವಿಪ್ರರಿಗೆ ಕೊಟ್ಟರು
ಸತ್ತಕರುವ ಹೊತ್ತು ಹೋಹರ ಹೊಲೆಯರ ಮಾಡಿದರು
ಜೀವದ ಹಸುವ ಗೋದಾನ ಮುಖದಲ್ಲಿ ತೆಕ್ಕೊಂಬವರ ವಿಪ್ರರ ಮಾಡಿದರು.
(ಸಂಕೀರ್ಣ ವಚನ ಸಂಪುಟ–೧, ಪು.ಸ–೧೧೧೦, ವ–೧೪೧೭)

ಹೀಗೆ ಪ್ರಾಣಿ ಬಲಿಯನ್ನು ಮಾಡದವರನ್ನು ಊರ ಹೊರಗೆ ಇಟ್ಟು, ಜೀವದ ಹಸುವನ್ನು ಗೋದಾನದ ಹೆಸರಿನಲ್ಲಿ ಪಡೆದು ಪ್ರಾಣಿ ಬಲಿ ಮಾಡಿದವರನ್ನು ಊರೊಳಗೆ ಇಟ್ಟರು. ಶ್ರೇಷ್ಠರು ಎಂದು ಕರೆಸಿಕೊಂಡರು ಇದು ಹಿಂಸೆ, ಅಹಿಂಸೆಯ ಚರ್ಚೆಗಿಂತ ಮಾಂಸಾಹಾರವನ್ನು ಎಲ್ಲರೂ ಸಮಾನವಾಗಿ ಭಕ್ಷಿಸುವ ಪದ್ಧತಿ ಇತ್ತು. ಆದರೆ ಜಾತಿ ಪ್ರಶ್ನೆಗಳು ಉದ್ಭವಿಸಿದಾಗ ಶ್ರೇಷ್ಠ–ಕನಿಷ್ಠ ಎಂಬುದು ಸಾಮಾಜಿಕವಾಗಿ ಬಳಕೆಯಲ್ಲಿತ್ತು.

ಅಮುಗೆ ರಾಯಮ್ಮ ನಿಷ್ಠುರವಾದಿ, ಅಜ್ಞಾನಿಗಳ ಅಜ್ಞಾನವನ್ನು ಕುರಿತು ಮಾತನಾಡುವಾಗ ಕುಲವನ್ನು ಕುರಿತು ತನ್ನ ಕಟುವಾದ ಶಬ್ದಗಳಿಂದ ವ್ಯಂಗ್ಯವಾದ ಮಾತನಾಡುತ್ತಾಳೆ.

ಜಾತಿಗೋತ್ರವನೆತ್ತಿ, ನುಡಿವಂಲೇಕೆ?
ಸಹಜ ಭಕ್ತರೆಂದು, ಶೀಲವಂತರೆಂದು
ವ್ರತಾಚಾರಿಗಳೆಂದು, ವ್ರತಭ್ರಷ್ಟರೆಂದು
ಅವರವರ ಕುಲವ ಕೇಳಿಕೊಂಡು
ಆಚಾರವುಳ್ಳವರು, ಅನಾಚಾರಿಗಳು ಎಂದು
(ಶಿವಶರಣೆಯರ ವಚನ ಸಂಪುಟ, ಪುಸ–೮೫೪, ವ–೫೯೦)

ಹೀಗೆ ಜಾತಿ, ಗೋತ್ರಗಳನ್ನು ಬೇರೆ ಮಾನದಂಡಗಳಿಂದ ಅಳೆಯುವುದು, ಶ್ರೇಷ್ಠತೆಯನ್ನು ನಿರ್ಧರಿಸುವುದು ಸಲ್ಲದು. ಮಾನವ ಜಗತ್ತು ಭೂಮಿಗೆ ಬರುವ ಮುಂಚೆ ಕುಲವನ್ನು ಕೇಳಿಕೊಂಡು ಜನಿಸುವುದಿಲ್ಲ. ಜನಿಸಲು ಸಾಧ್ಯವೂ ಇಲ್ಲ ಎಂದು ಕುಲವನ್ನು ಕುರಿತು ಛಲ, ಧೈರ್ಯ, ನಿಷ್ಠುರವಾದ ನುಡಿಗಳನ್ನು ಆಡುತ್ತಾಳೆ.

ಕಾಳವ್ವೆ ಏಕೈಕ ದಲಿತ ವಚನಕಾರ್ತಿ, ಶೂದ್ರ ವಚನಕಾರ ಉರಿಲಿಂಗಪೆದ್ದಿಯ ಸತಿ. ಈಕೆ ಸ್ಥಾಪಿತ ವ್ಯವಸ್ಥೆಯ ವಿರುದ್ಧ ದಿಟ್ಟತನದಿಂದ ದನಿ ಎತ್ತಿದವಳು ಶರಣ ಚಳುವಳಿಗೆ ಈ ಧ್ವನಿ ಸಾರ್ಥಕ ರೂಪವನ್ನು ಪಡೆದುಕೊಳ್ಳುತ್ತದೆ.

ಕುರಿ ಕೋಳಿ ಕಿರು ಮೀನು ತಿಂಬವರಿಗೆಲ್ಲ
ಕುಲಜ ಕುಲಜರೆಂಬರು
ಶಿವಗೆ ಪಂಚಾಮೃತದ ಕರೆವ ಪಶುವತಿಂಬ
ಮಾದಿಗ ಕೀಳು ಜಾತಿಯೆಂಬರು
ಅವರೆಂತು ಕೀಳು ಜಾತಿಯಾದರು?
ಜಾತಿಗಳು ನೀವೇಕೆ ಕೀಳಾಗಿರೋ?
ಬ್ರಾಹ್ಮಣ ನುಂಡುದು ಪುಲ್ಲಿಗೆ ಶೋಭಿತವಾಗಿ
ನಾಯಿ ನೆಕ್ಕಿ ಹೋಯಿತು
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಗೆ ಶೋಭಿತವಾಯಿತು
ಅಂತೆಂದಡೆ;
ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು
ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು
ಶುದ್ದವೆಂಬ ಕುಡಿವ ಬುದ್ಧಿಗೇಡಿ ವಿಪ್ರರಿಗೆ
ನಾಯಕ ನರಕ ತಪ್ಪದಯ್ಯ
ಉರಿಲಿಂಗ ಪೆದ್ದಿಗಳರಸ ಒಲ್ಲನವ್ವಾ
(ಶಿವಶರಣೆಯರ ವಚನ ಸಂಪುಟ, ಪುಸ–೮೬೮, ವ–೭೩೨)

ಆಹಾರ ಪದ್ಧತಿಯಲ್ಲಿ ಶ್ರೇಷ್ಠ–ಕನಿಷ್ಠ ಎಂಬುದಿಲ್ಲ ಆದರೆ ಪೂಜಿಸಲ್ಪಡುವ ಪ್ರಾಣಿಯನ್ನು ತಿಂದರೆ ಕೀಳು ಜಾತಿಯವರಾಗುತ್ತಾರೆ. ಪ್ರಾಣಿಗಳನ್ನು ಹೊತ್ತು ತಂದು ಆಹಾರಕ್ಕಾಗಿ ಕೊಲ್ಲುವವರು ಕುಲಜರು ಎಂದು ಕರೆಯಲಾಗುತ್ತದೆ. ಹೀಗಾಗಿ ಕೀಳುಜಾತಿಯವರಾಗುವುದು, ಕುಲಜರಾಗುವುದು ಹೇಗೆ? ಒಂದರಲ್ಲಿ ಹಿಂಸೆ–ಇನ್ನೊಂದರಲ್ಲಿ ಅಹಿಂಸೆಯಿದೆ. ಹಿಂಸೆಯಿಂದ ಕೂಡಿದ್ದು ಕುಲಜ, ಅಹಿಂಸೆಯಿಂದ ಕೂಡಿದ್ದು ಕೀಳು ಜಾತಿ ಈ ಬಗೆಯ ದ್ವಂದ್ವವನ್ನು ಪ್ರಶ್ನೆ ಮಾಡುವುದರ ಜೊತೆಗೆ ಚರ್ಮದಿಂದ ಮಾಡಿದ ಉತ್ಪನ್ನಗಳಾದ ಸಗ್ಗಳೆಯ ನೀರು, ಸಿದ್ದಲಿಕೆಯ ತುಪ್ಪವನ್ನು ಶುದ್ಧ ಎಂದು ಭೋಗಿಸುವ ಬುದ್ದಿ ಹೀನರಿಗೆ ಇರಬಹುದಾದ ತಾತ್ವಿಕ ತಾಕಲಾಟವನ್ನು ಪ್ರಶ್ನೆ ಮಾಡುವ ಮುಖಾಂತರ ಕೀಳಾಗಿ ನೋಡುವ ಪರಿಪಾಟಕ್ಕೆ ದಿಟ್ಟವಾದ ಪ್ರಶ್ನೆ ಮತ್ತು ಉತ್ತರವನ್ನು ನೀಡುತ್ತಾಳೆ.

ಹಾವಿನ ಹಾಳಕಲ್ಲಯ್ಯ ಅಕ್ಕಸಾಲಿಗ ಮನೆತನಕ್ಕೆ ಸೇರಿದವನು ಈತನ ವಚನಗಳೂ ಕೂಡ ಜಾತಿ ನಿರಾಕರಣೆಯನ್ನು ಮಾಡುವುದರ ಮುಖಾಂತರ ಸಮಾಜದ ವ್ಯಂಗ್ಯವನ್ನು ತೋರಿಸುತ್ತದೆ.

(೧) ಜಾತಿಯಲ್ಲಿ ಅಧಿಕವೆಂದು ನುಡಿವರು ವಿಪ್ರಜನರು
ಶ್ವಪಚ, ಮಚ್ಚಿಗ, ಬೋಯ ಕುಲಜರೆ ದ್ವಿಜರು?
ಅಗಸ, ಕಮ್ಮಾರ, ನಾವಿದ ಕುಲಜರೆ ದ್ವಿಜರು?
(೨) ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ, ಎಲ್ಲಿರಿಗೆಯೂ ಜನನವೊಂದೆ
ಆಹಾರ, ನಿದ್ರೆ, ಭಯ, ಮೈಥುನವೊಂದೆ, ಪುಣ್ಯಪಾಪವೊಂದೆ, ಸ್ವರ್ಗವೊಂದೆ
ಬೇರೆಂಬ ಭಂಗಿತರು ನೀವು ಕೇಳಿರೆ!
(ಸಂಕೀರ್ಣ ವಚನ ಸಂಪುಟ–೪, ಪುಸ–೧೭೪೮, ವ–೧೧೫೦, ಪುಸ–೧೭೫೦, ವ–೧೧೭೧)

ಜಾತಿಯಲ್ಲಿ ಅಧಿಕ ಯಾರು? ಕಾಯಕವೇ ಕೈಲಾಸ ಎಂದು ಕೊಂಡ ಶರಣರೇ? ಅಥವಾ ದ್ವಿಜರೆ ಎಂಬ ಪ್ರಶ್ನೆ ವಚನಕಾರನದು. ನಿಜವಾಗಿಯೂ ಕುಲಜರು ಯಾರು? ಎಂಬ ಪ್ರಶ್ನೆಗಳನ್ನು ಹಾಕುತ್ತಾ ಉತ್ತರಗಳನ್ನು ಕಂಡು ಕೊಂಡ ಇವರು ಬ್ರಾಹ್ಮಣ, ಶ್ವಪಚನ ಜನನ ಒಂದೇ ರೀತಿಯಾದುದು, ಲೌಕಿಕವಾಗಿ ನಡೆಯುವ ಎಲ್ಲ ಬಗೆಯ ಚಟುವಟಿಕೆಗಳು ಒಂದೇ ಇರುವಾಗ ಮೊದಲು, ಕಡೆ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂಬ ತಾತ್ವಿಕವಾದ ಆಲೋಚನೆಗಳನ್ನು ಮುಂದಿಡುತ್ತಾ, ಶ್ರೇಷ್ಠ–ಕನಿಷ್ಠ ಎಂಬ ಸಣ್ಣತನದ ಆಲೋಚನೆಗಳನ್ನು ತಳ್ಳಿ ಹಾಕುತ್ತಾನೆ.

೧೨ನೇ ಶತಮಾನದ ಶರಣರು ಚಾತುವರ್ಣ ವ್ಯವಸ್ಥೆಯನ್ನು ತಿರಸ್ಕರಿಸಿ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನವಿರದ ದಲಿತರು ಮತ್ತು ಇತರೆ ನಿಮ್ನ ಜಾತಿಗಳಿಗೆ ಸಮಾಜ ಮುಖಿಯಾದ ಮುಖ ತೊಡಿಸುವ ಪ್ರಯತ್ನ ಮಾಡಿದರು. ದಲಿತರನ್ನು 'ಗೋತ್ರಪುರುಷ' ಎಂದು ಗೌರವಿಸುವ ಪ್ರಯತ್ನ ಮಾಡಿದರು. ತನ್ನ ಕಾಲದ ಸಮಾಜದೊಂದಿಗೆ ಜೀವಂತ ಸಂಬಂಧ ಹೊಂದಿದ್ದ ವಚನಗಳು ಮತ್ತು ವಚನಕಾರರು ಸ್ಥಾಪಿತ ಹಿತಾಸಕ್ತಿವಿರುದ್ದ ಬಹುದೊಡ್ಡ ಆಂದೋಲನವನ್ನು ರೂಪಿಸಿದರು. ಭಕ್ತಿ ಮಾರ್ಗದ ಮೂಲಕ ಸಮಾಜವನ್ನು ಸಂಘಟಿಸಬಹುದು ಎನ್ನುವುದಕ್ಕೆ ವಚನ ಚಳುವಳಿ ಸಾಕ್ಷಿಯಾಯಿತು. "ವರ್ಣ ವ್ಯವಸ್ಥೆಯ ವಿಕಾರ ರೂಪಗಳನ್ನು ಅಳಿಸಿ ಹಾಕಿದ ವಚನ ಚಳುವಳಿ ಭಾರತೀಯ ಚರಿತ್ರೆಯಲ್ಲಿ ಅದುವರೆಗೆ ದಾಖಲಾಗದೇ ಇದ್ದ ದಲಿತ ಬದುಕಿನ ಬಹುಮುಖಿ ಸಂಸ್ಕೃತಿಯನ್ನು ಎತ್ತಿಹಿಡಿದದ್ದು ಬಹುಮುಖ್ಯ ಸಂಗತಿಯಾಗುತ್ತದೆ"[೪] ಎನ್ನುವ ಮಾತನ್ನು ಒಪ್ಪಬಹುದು.

ಈ ಬಗೆಯ ಸಾಹಿತ್ಯಕ ಮತ್ತು ಧಾರ್ಮಿಕ ಚಳುವಳಿಯ ಪರಿಣಾಮಗಳೇನು ಎಂಬುದು ಬಹುಮುಖ್ಯವಾಗಿ ಕಂಡು ಕೊಳ್ಳಬೇಕಾದ ಸತ್ಯವಾಗಿದೆ. ಶೈವ ಪರಂಪರೆಯನ್ನು ಅನುಸರಿಸುತ್ತಿದ್ದ ಕಾಲಮಾನದಲ್ಲಿ ವೈದಿಕ ಪರಂಪರೆಯಿಂದ ಬಂದ ವೇದ, ಉಪನಿಷತ್ತು, ಆಗಮ ಶಾಸ್ತ್ರಗಳನ್ನು ಸಾರಸಗಟಾಗಿ ತಿರಸ್ಕರಿಸಿತು. ಅದಕ್ಕೆ ಕಾರಣೀಭೂತರಾದ ವ್ಯಕ್ತಿ, ಧರ್ಮವನ್ನು ಟೀಕಿಸಿದರು. ಹೀಗಾಗಿ ಬಸವಣ್ಣನವರ ಕಾಲದ ಈ ಕ್ಷಿಪ್ರ ಬದಲಾವಣೆ ವೈದಿಕ ಧರ್ಮದಲ್ಲಿ ತಲ್ಲಣ ಉಂಟು ಮಾಡಿದೆ. ಕಾಲನಂತರದಲ್ಲಿ ಬಿಜ್ಜಳನನ್ನು ಬಳಸಿಕೊಂಡು ಆಂದೋಲನವನ್ನು ಹಿಮ್ಮೆಟಿಸಲಾಗಿದೆ. ವೈದಿಕ ಧರ್ಮಕ್ಕೆ ವಿರೋಧ ವ್ಯಕ್ತಪಡಿಸಿದ ವಚನಕಾರರಿಗೆ ಶಿಕ್ಷೆ ವಿಧಿಸಲಾಗಿದೆ. ಹೀಗಾಗಿ ವೈದಿಕ ಧರ್ಮದ ಕೈ ಮೇಲಾಗಿದೆ. "ಜಾತ್ಯಾಭಿಮಾನಿಗಳು ಬಸವಣ್ಣನವರ ಈ ಸಮಾನತಾ ತತ್ವಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಕಾರಣದಿಂದಾಗಿ ಪ್ರಭುತ್ವದ ಕಿವಿಕಚ್ಚಿ, ಪ್ರಭುತ್ವ, ಶರಣರ ಮತ್ತು ಶರಣ ಧರ್ಮದ ವಿರುದ್ಧ ತಿರುಗಿ ಬೀಳಲು ಸಂಚು ನಡೆಸಿದ್ದರಿಂದ ಬಸವಣ್ಣನವರ ಕಾಲದಲ್ಲೇ ಹುಟ್ಟು ಹಾಕಿದ ಸಮಾಜೋಧಾರ್ಮಿಕ ಕ್ರಾಂತಿಗೆ ಹಿನ್ನೆಡೆಯುಂಟಾಯಿತು"[೫] ಎಂಬ ಮಾತನ್ನು ಒಪ್ಪಬಹುದು. ಹಾಗೆಯೇ "ಧಗಧಗನೆ ಉರಿದು ಮಾಯವಾಗಿ ಹೋದಂತೆ ವಚನಕಾರ ಚಳುವಳಿ ಇತಿಹಾಸದ ಮಡಿಲಲ್ಲಿದ್ದೂ, ಪುರಾಣದಂತೆ ನಮ್ಮ ಕಲ್ಪನೆಯನ್ನು ಕೆಣಕುತ್ತದೆ. ಹೀಗಾಗಿಯೇ ಅದು ಮರುಹಂಬಲದ ನಿರಂತರ ನೆಪವೂ ಮತ್ತು ಭವಿಷ್ಯದ ಆಸೆಗಳ ಕನಸಿನ ಭೂಮಿಯೂ ಆಗಿದೆ"[೬] ಎಂಬ ಮಾತು ಸಾರ್ವಕಾಲಿಕ ಸತ್ಯವಾಗಿದೆ. ಬಸವಣ್ಣನವರ ಕಾಲಘಟ್ಟದ ವಚನಗಳಲ್ಲಿ ಕಂಡುಬಂದ ಅಬ್ಬರ, ಮೊನಚುತನ ಆನಂತರ ಬಂದ ವಚನಕಾರರಲ್ಲಿ ಕಾಣುವುದಿಲ್ಲ. ಬದಲಾವಣೆಗೆ ಒಡ್ಡಿಕೊಳ್ಳಬೇಕಾಗಿದ್ದ ಸಂದರ್ಭದಲ್ಲಿ ಆಂದೋಲನ ಸೋತಿತೇ? ಅಥವಾ ಸೋಲಿಸಲಾಯಿತೆ? ಎನ್ನುವುದು ಚರ್ಚೆಯ ವಿಷಯ. ಆದರೆ "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬುದು ಸ್ಥಾವರವನ್ನು ಉಳಿಸಿಕೊಂಡು ಜಂಗಮತ್ವವನ್ನು ಉಳಿಸಿಕೊಳ್ಳಲಾಗಲಿಲ್ಲ ಹೀಗಾಗಿ ಶೈವ ಪರಂಪರೆಯ ಆಚರಣೆಗಳು, ವೀರಶೈವ ಪರಂಪರೆಯ ಆಚರಣೆಗಳಾಗಿ ಉಳಿಯದೇ ವೈದಿಕ ಪರಂಪರೆಯ ಮುಂದುವರಿದ ಭಾಗವಾಗಿ ಗೋಚರಿಸಿತು. ಸಂಸ್ಕೃತಾಧ್ಯಯನ, ವೇದಾಗಮ ಪಾಠ ಆಚರಣೆ ಮುಂತಾದವುಗಳಲ್ಲಿ ತನ್ನನ್ನು ತೊಡಗಿಸಿಕೊಂಡಿತು. ಈ ಎಲ್ಲಾ ಕಾರಣಗಳಿಂದ ಶೈವ ಚಿಂತಕರ 'ಮಠ ವಿರೋಧಿ' ಧೋರಣೆ ಆ ಕಾಲಕ್ಕಷ್ಟೇ ಸೀಮಿತವಾಗಿ ನಂತರದ ದಿನಗಳಲ್ಲಿ ಮಠಗಳು ಹುಟ್ಟಿಕೊಂಡವು ಆಧುನಿಕ ಸಮಾಜ ವಚನಕಾರರ ಚರಿತ್ರೆ ಅಥವಾ ಚಳುವಳಿಯ ವೈಭವೀಕರಣಕ್ಕೆ ಸೀಮಿತವಾಗಿ ಅವರ ಜೀವನ ಸಂಬಂಧಿಯಾದ ಆಚರಣೆಗಳು ವಾಸ್ತವರೂಪಕ್ಕೆ ಇಳಿಯಲಿಲ್ಲ ಆದ್ದರಿಂದ "ವೀರಶೈವ ಚಳುವಳಿ ಯಾವ ಅವೈದಿಕ (ದ್ರಾವಿಡ) ಶ್ರೇಷ್ಟ ಪರಂಪರೆಯನ್ನು ಪ್ರತಿನಿಧಿಸಿತೋ, ಅದನ್ನು ವೈದಿಕದಿಂದ ಪ್ರತ್ಯೇಕಿಸಲು ಸಮರ್ಥವಾಗಲಿಲ್ಲ ವೈದಿಕ ಅವೈದಿಕ ಎಂಬ ನೆಲೆಯಲ್ಲಿ ಚಳುವಳಿ ತನ್ನ ಜೀವ ಸತ್ವವನ್ನು ಪಡೆಯಲಿಲ್ಲ"[೭] ಹೀಗಾಗಿ ಸಮಾನತೆ ಮತ್ತು ಜಾತಿಪದ್ಧತಿಯ ನಿರಾಕರಣೆಯನ್ನು ಅತ್ಯಂತ ಶಕ್ತಿಯುತವಾಗಿ ಪ್ರತಿಪಾದಿಸಿತು ಆದರೆ ಕಾಲಸರಿದಂತೆ ಜಾತಿ ವಿನಾಶದ ತನ್ನ ತಾತ್ವಿಕತೆಯ ಉದ್ದೇಶ ಈಡೇರಲಿಲ್ಲ.

**ಕೊನೆ ಟಿಪ್ಪಣಿ**


1. ವಿಚಾರ ಸಾಹಿತ್ಯ:೨೦೦೦,ಸಂ:ಡಾ.ಜಿ.ಆರ್.ತಿಪ್ಪೇಸ್ವಾಮಿ; ಲೇ;ಸಿ.ಪಿ.ಸಿದ್ದಾಶ್ರಮ:ಪುಟ–೧೫೮; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೨೦೦೧
2. ವಚನಕಾರರು ಮತ್ತು ದಲಿತ ಸಂವೇದನೆ; ಡಾ.ಬಸವರಾಜ ಸಬರದ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಪುಟ–೦೧; ೨೦೦೪.
3. ವಚನಕಾರರು ಮತ್ತು ದಲಿತ ಸಂವೇದನೆ; ಡಾ.ಬಸವರಾಜ ಸಬರದ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಪುಟ–೦೨; ೨೦೦೪.
4. ವಚನಕಾರರು ಮತ್ತು ದಲಿತ ಸಂವೇದನೆ; ಡಾ.ಬಸವರಾಜ ಸಬರದ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಪುಟ–೩೨, ೨೦೦೪.
5. ವಿಚಾರ ಸಾಹಿತ್ಯ:೨೦೦೦,ಸಂ:ಡಾ.ಜಿ.ಆರ್.ತಿಪ್ಪೇಸ್ವಾಮಿ,ಲೇ;ಸಿ.ಪಿ.ಸಿದ್ದಾಶ್ರಮ:ಪುಟ–೧೭೪; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.
6. ಆಯ್ದ ವಿಮರ್ಶಾ ಲೇಖನಗಳು; ಪ್ರೊ.ರಾಜೇಂದ್ರ ಚೆನ್ನಿ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಕನ್ನಡ ಭವನ, ಬೆಂಗಳೂರು; ಪುಟ–೩೬; ೨೦೧೧.
7. ಸಾಹಿತ್ಯ ವಿಮರ್ಶೆ; ೧೯೯೩; ಸಂ.ಡಾ.ಕೇಶವಶರ್ಮ.ಕೆ; ಲೇ.ಎಸ್.ಎಸ್.ಹಿರೇಮಠ್; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ಪುಟ–೧೩೮; ೧೯೯೭.